# *Form No.4.*
# *Deposition Sheet( R.P.52)*

**ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.**

**FDP Case Number:13/2020**
**Witness for: CW 1**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಪತ್ ಕುಮಾರ್ ಶೆಟ್ಟಿ |
| ತಂದೆ ಹೆಸರು | ಃ | ಗೋಪಾಲ ಶೆಟ್ಟಿ |
| ಪ್ರಾಯ | ಃ | 46 ವರ್ಷ |
| ಉದ್ಯೋಗ | ಃ | ವಕೀಲರು |
| ವಾಸ | ಃ | ಕಾರ್ಕಳ |

ದಿನಾಂಕ : **18.07.2022** ರಂದು ಸಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎಂ ಕೆ ವಿ ಕೆ ಅರ್ಜಿದಾರರ ಪರ ವಕೀಲರಿಂದಃ

1. ನ್ಯಾಯಾಲಯವು ನನ್ನನ್ನು ಆಯುಕ್ತರನ್ನಾಗಿ ನೇಮಿಸಿದ ಪ್ರಕಾರ ಸ್ಥಳಕ್ಕೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ನಿಸಿ - 1 ಮತ್ತು ನಕ್ಷೆಯನ್ನು ನಿಸಿ - 2 ಎಂದು ಗುರುತಿಸಲಾಯಿತು. ಘಟನಾ ಸ್ಥಳಕ್ಕೆ ಭೇಟಿ ನೀಡುವ ಪೂರ್ವದಲ್ಲಿ ನಾನು ಅರ್ಜಿದಾರರಿಗೆ ಅವರ ವಕೀಲರ ಮೂಲಕ ಮತ್ತು ಎದುರುದಾರರಿಗೆ ವೈಯಕ್ತಿಕವಾಗಿ ಮತ್ತು ಅವರ ವಕೀಲರಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸು ಕಳುಹಿಸಿರುತ್ತೇನೆ. ಅದರ

ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು , ನಿಸಿ - 3 ಮತ್ತು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಬಗ್ಗೆ ಎರಡು ರಶೀದಿ ಹಾಜರುಪಡಿಸಿದ್ದು , ನಿಸಿ - 3 (ಎ) ಮತ್ತು ಎದುರುದಾರರಿಗೆ ಮತ್ತು ಎದುರುದಾರರ ವಕೀಲರಿಗೆ ನೋಟೀಸು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು , ಒಟ್ಟಾಗಿ ನಿಸಿ - 3(ಬಿ) ಎಂದು ಗುರುತಿಸಲಾಯಿತು.

2. ನಾನು ಕಳೆದ 20 ವರ್ಷಗಳಿಂದ ನ್ಯಾಯಾಲಯದಲ್ಲಿ ವಕೀಲರ ವೃತ್ತಿಯನ್ನು ನಡೆಸುತ್ತಿದ್ದೇನೆ. ನನ್ನನ್ನು ಹಲವಾರು ಪಾಲು ದಾವೆಯಲ್ಲಿ ವಿಭಜನೆ ಮಾಡಲು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಕಾತಿ ಮಾಡಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವಂತಹ ಎಲ್ಲಾ ವರದಿಗಳನ್ನು ನ್ಯಾಯಾಲಯವು ಅಂಗೀಕರಿಸಿರುತ್ತದೆ. ಯಾವುದೇ ವರದಿಯನ್ನು ತಿರಸ್ಕರಿಸಿರುವುದು ನನ್ನ ಗಮನಕ್ಕೆ ಬಂದಿಲ್ಲ.

<u>ಪಾಟೀ ಸವಾಲುಃ</u> ಶ್ರೀ ಪಿ ಎಸ್ ಕೆ ಎದುರುದಾರರ ಪರ ವಕೀಲರಿಂದಃ

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದಾರೆ. ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.